**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪಂರಾ 189 ಜಿಪಸ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:06-08-2021.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.

ಮಾನ್ಯರೆ,

ವಿಷಯ: 14ನೇ ಹಣಕಾಸು ಆಯೋಗದ ಅನುದಾನವನ್ನು 2020-21ರ ಆರ್ಥಿಕ ವರ್ಷದ ನಂತರವೂ ಬಳಸಿಕೊಳ್ಳುವ ಕುರಿತು.

ಉಲ್ಲೇಖ: ಭಾರತ ಸರ್ಕಾರ ಪಂಚಾಯತ್ ರಾಜ್ ಮಂತ್ರಾಲಯ ಇವರ ಪತ್ರ ಸಂಖ್ಯೆ:M-11015/130/2017-FD, ದಿನಾಂಕ:24-03-2021.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 14ನೇ ಹಣಕಾಸು ಆಯೋಗದ ಅನುದಾನವನ್ನು ಕೋವಿಡ್-19ರ ಸಂಬಂಧ ಗ್ರಾಮ ಪಂಚಾಯತಿಗಳು ಎದುರಿಸಿರುವ ನಿರ್ಬಂಧಗಳಿಂದಾಗಿ ಆರ್ಥಿಕ ವರ್ಷ 2020-21ರ ನಂತರವೂ ಬಳಸಿಕೊಳ್ಳಲು ಅನುಮತಿಗಾಗಿ ರಾಜ್ಯಗಳು ಕೋರಿಕೆಯನ್ನು ಪಂಚಾಯತ್ ರಾಜ್ ಮಂತ್ರಾಲಯಕ್ಕೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಆರ್ಥಿಕ ಸಚಿವಾಲಯದೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಸದರಿಯವರ ಸಹಮತಿಯನ್ವಯ ಒಂದು ಬಾರಿ ವಿಶೇಷ ಪ್ರಕರಣ ಎಂದು ಪರಿಗಣಿಸಿ ವಿನಾಯಿತಿಯನ್ನು ನೀಡಿದ್ದು, ಗ್ರಾಮ ಪಂಚಾಯತಿಗಳು 14ನೇ ಹಣಕಾಸು ಆಯೋಗದ ಅನುದಾನವನ್ನು 2020-21ನೇ ಆರ್ಥಿಕ ವರ್ಷದ ನಂತರವೂ ಅಂದರೆ ದಿನಾಂಕ:31-03-2022 ರವರೆಗೆ ವೆಚ್ಚ ಭರಿಸಲು ಅನುಮತಿ ದೊರೆತಿದ್ದು, ಗ್ರಾಮ ಪಂಚಾಯತಿಗಳು ಬಾಕಿ ಉಳಿದ ಅನುದಾನವನ್ನು ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ(GPDP)ಯಲ್ಲಿ ಸೇರಿಸುವ ಕಾಮಗಾರಿಗಳು ಮತ್ತು ಆರ್ಥಿಕ ಇಲಾಖೆಯು ಹೊರಡಿಸಿದ ಮಾರ್ಗಸೂಚಿಗಳಿಗನುಗುಣವಾಗಿ ಬಳಸತಕ್ಕದ್ದು ಎಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ, 2020-21ರ ಆರ್ಥಿಕ ವರ್ಷದ ನಂತರವೂ ಅಂದರೆ ದಿನಾಂಕ:31-03-2022 ರವರೆಗೆ 14ನೇ ಹಣಕಾಸು ಆಯೋಗದ ಅನುದಾನವನ್ನು ಈ ಮೇಲ್ಕಂಡ ನಿಬಂಧನೆಗಳನ್ವಯ ಗ್ರಾಮ ಪಂಚಾಯತಿಗಳು ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

Chetna 6/8/21

(ಚೇತನ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

6/8/21

ಪ್ರತಿಯನ್ನು:

1. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
2. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.(ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).